ಅದನ್ನು ವಿನ್ಯಾಸಗೊಳಿಸಿದ್ದರು. ಇದರ ಮಟಮಟ ಮಧ್ಯೆ ಇರುವ ನಾನು ಇವೆಲ್ಲವನ್ನು ನಿವಾರಿಸಿ ಬದುಕಿಕೊಳ್ಳುವುದಾದರೂ ಹೇಗೆ? ನನ್ನ ಪ್ರಭಾವವನ್ನು ಯಾರ ಮೇಲೆ ಬೀರಿ ಅವರಿಗೆ ಬುದ್ಧನಿಗೆ ಆದಂತೆ ಜ್ಞಾನೋದಯವನ್ನು ಉಂಟುಮಾಡಿ ನನ್ನನ್ನು ನಾನು ಬಚಾವು ಮಾಡಿಕೊಳ್ಳಲಿ?

ಇವೆಲ್ಲ ವಿಚಾರಗಳು ಇನ್ನೂ ಊರ ಜನಗಳಿಗೆ ತಿಳಿದಿಲ್ಲ. ತಿಳಿದರೆ ಅವರೆಲ್ಲ ಒಗ್ಗೂಡಿ ಹಿಂದೆಲ್ಲ ನಡೆಸಿದಂತೆ ಏನಾದರೂ ಚಳುವಳಿ ಮಾಡಿ ನನ್ನನ್ನು ಉಳಿಸಿಕೊಳ್ಳುತ್ತಾರೋ; ಇಲ್ಲವೇ ರೈಲೂ ಬೇಡ, ಫ್ಲೈಓವರ್ ಬೇಡ ಎಂದು ನಿರಾಕರಿಸುತ್ತಾರೋ ಗೊತ್ತಿಲ್ಲ. ಆದರೆ ಅಭಿವೃದ್ಧಿ ಕೆಲಸಗಳು ಇವೆಲ್ಲ, ಯಾರಾದರೂ ಅಡ್ಡಿಪಡಿಸಿದರೆ, ಅವರು ಎಷ್ಟೇ ದೊಡ್ಡವರಾಗಿರಲಿ, ಅವರ ಮೇಲೆ ಎಫ್.ಐ.ಆರ್. ಹಾಕಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವರೇ ಬಹಿರಂಗ ಹೇಳಿಕೆ ನೀಡಿಬಿಟ್ಟಿದ್ದರು. ಅವರು ಪ್ರಧಾನಮಂತ್ರಿಗೆ ತುಂಬಾ ಆಪ್ತರಂತೆ. ಹೀಗಿರುವಾಗ ಯಾರು ನನ್ನ ಪರವಾಗಿ ಜೈಲಿಗೆ ಹೋಗಲು ಸಿದ್ಧರಿದ್ದಾರೆ. ನನ್ನ ಅನುಕೂಲಗಳ ಪಟ್ಟಿ ಮಾಡಿ, ಅನನುಕೂಲಗಳಿಗಿಂತ ಅನುಕೂಲಗಳೇ ಹೆಚ್ಚು ಎಂದು ಕೋರ್ಟಿನಲ್ಲಿ ಯಾರು ವಾದ ಮಂಡಿಸುತ್ತಾರೆ.

ಹಿಂದೆಲ್ಲ ಅಂದರೆ ಎಂಬತ್ತರ ದಶಕದಲ್ಲಿ ಊರಿಗೊಂದಾದರೂ ಅರಳೀಮರ ಇರುತ್ತಿತ್ತು. ಅದರ ಮೌಲ್ಯ ಎಷ್ಟು ಅಂತ ಗೊತ್ತಾ ನಿಮಗೆ ಎಂದು ಆಕಾಶವಾಣಿಯಲ್ಲಿ ಸಂಜೆ ಕೃಷಿರಂಗ ಕಾರ್ಯಕ್ರಮದಲ್ಲಿ ಎಂ.ಟಿ.ಜಯಣ್ಣ ಅನ್ನೋರು ಪ್ರಶ್ನೆ ಮಾಡುತ್ತಿದ್ದರು. ಒಂದು ಅರಳೀಮರ ಒಂದು ಕೋಟಿ ರೂಪಾಯಿಯ ಆಮ್ಲಜನಕವನ್ನು ಉತ್ಪಾದಿಸುತ್ತದೆ ಎಂದು ಹೇಳುತ್ತಿದ್ದರು. ಮನುಷ್ಯರಿಗೆ ಮತ್ತು ಪ್ರಾಣಿ ಪಕ್ಷಿಗಳಿಗೆ ಬೇಕಾದ ಆಮ್ಲಜನಕ ನನ್ನಂಥ ಮರಗಳನ್ನು ಬಿಟ್ಟರೆ ಇನ್ನೆಲ್ಲಿ ಜನಗಳಿಗೆ ಸಿಗುತ್ತದೆ. ಅಂಥ ಮರಗಳನ್ನೆಲ್ಲ ಕಡಿದು, ವಾಹನಗಳ, ಫ್ಯಾಕ್ಟರಿಯ ಹೊಗೆಯನ್ನೆಲ್ಲ ತುಂಬಿಕೊಂಡ ವಾತಾವರಣವನ್ನು ನಿರ್ಮಾಣ ಮಾಡಿಕೊಂಡು ಬರೀ ಅಸ್ತಮಾ, ದಮ್ಮಿನಂಥ ಕಾಯಿಲೆಗಳನ್ನು ಮೈಮೇಲೆ ಹೇರಿಕೊಂಡು ಉಸಿರಾಡಲೂ ಕಷ್ಟಪಡುತ್ತಿದ್ದಾರೆ. ಆಗ ಆಸ್ಪತ್ರೆಗಳಲ್ಲಿ ವೆಂಟಿಲೇಶನ್‌ಗೆ ಅಂತ ಲಕ್ಷಾಂತರ ರೂಪಾಯಿ ಬಿಲ್ ಕಟ್ಟುತ್ತಾರಲ್ಲ, ಆಗ ನನ್ನ ಆಮ್ಲಜನಕದ ಬೆಲೆ ಎಷ್ಟೂಂತ ಗೊತ್ತಾಗುತ್ತೆ. ಆಗಲೇ ಶುದ್ಧವಾದ ಆಮ್ಲಜನಕಕ್ಕೆ ಎಂತೆಲ್ಲ ಕಾಯಿಲೆಗಳನ್ನು, ಎಷ್ಟೆಲ್ಲ ಗಾಯಗಳನ್ನು ವಾಸಿ ಮಾಡುವ ಶಕ್ತಿ ಇದೆ ಎಂಬುದರ ಅರಿವಾಗುವುದು.

ಅರ್ಧಾಂಗಿ ಇದ್ದವಳು ಹೇಳುತ್ತಿದ್ದಳು: 'ಏನು ಸ್ವಾರ್ಥ ರೀ ನಿಮಗೇ. ಐನೂರು ವರ್ಷ ಬದುಕಿದ್ದೀರಿ, ಇನ್ನೂ ಬದುಕಬೇಕೆಂಬ ದುರಾಸೆಯೇ. ಸಾಕು ಇನ್ನು ನಮ್ಮ ಬದುಕು. ನನ್ನನ್ನೂ ಕಡಿದುಬಿಡಲಿ. ನಾವೂ ಸತ್ತ ಮೇಲೆ ಉಸಿರಾಡಲು ಅಷ್ಟಿಷ್ಟು ಗಾಳಿಯೂ ಸಿಗದೇ, ನಾವು ಉತ್ಪಾದಿಸುವ ಆಮ್ಲಜನಕವೂ ಸಿಗದೇ, ಗಾಳೀ ಗಾಳಿ ಎಂದು ಉಸಿರಾಡಲು ಜನ ಹಾಹಾಕಾರ ಪಡಬೇಕು, ವಿಲವಿಲ ಒದ್ದಾಡಬೇಕು. ನಾವು ಏನು ಮಳೆ ಮೋಡಗಳನ್ನು ಆಕರ್ಷಿಸಿ ಮಳೆ ಬರಿಸುತ್ತೇವಲ್ಲ, ಅದು ನಿಂತು ಹೋದಾಗ ನೀರೂ ನೀರು ಅಂತ ದಾಹ ಶುರುವಾಗುತ್ತಲ್ಲ, ಆಗ ಗೊತ್ತಾಗುತ್ತೆ ನಮ್ಮ ಬೆಲೆ ಏನು ಅಂತ. ಆವಿಯಾದ ಸಮುದ್ರದ ನೀರು ಮೋಡವಾಗಿ ಸಮುದ್ರದ ಮೇಲೇ ಮಳೆ ಹುಯ್ಯಬೇಕು, ಈ ನರಪಿಳ್ಳೆಗಳಿಗೆ ಕುಡಿಯಲು ಒಂದು ಹನಿ ನೀರೂ ಸಿಗಬಾರದು, ಒಂದಿಷ್ಟು ಗಾಳಿಯೂ ಸಿಗಬಾರದು. ಇವೆರಡೂ ಇಲ್ಲವೆಂದಾದರೆ ಇನ್ನು ಅನ್ನವನ್ನು ಹೇಗೆ ಬೆಳೆದುಕೊಳ್ಳುತ್ತಾರೆ. ಅದನ್ನೇನು ಫ್ಯಾಕ್ಟರಿಯಲ್ಲಿ ತಯಾರು ಮಾಡಲು ಸಾಧ್ಯವೇ. ನೆಲದಲ್ಲೇ ಬೆಳೆಯಬೇಕು ತಾನೇ. ಯಾವಾಗ ಆಹಾರವನ್ನೂ ಬೆಳೆಯಲು ಸಾಧ್ಯವಾಗುವುದಿಲ್ಲವೋ ಆಗ ಗೊತ್ತಾಗುತ್ತೆ ನಮ್ಮ ಬೆಲೆ ಏನು ಅಂತ. ಸಾಯೋಣ ಬಿಡಿ. ನೀವು ಯಾರಿಗೂ ನಿಮ್ಮ ಶಿಫಾರಸ್ಸಿನ ಅಲೆಯನ್ನು ಬೀಸಿ ಅವರ ಮನಃಪರಿವರ್ತನೆ ಮಾಡುವುದು ಬೇಡ' ಎಂದು ಹಟ ಹಿಡಿದಳು. ಸುಮಾರು ಇನ್ನೂರುಇನ್ನೂರೈವತ್ತು ವರ್ಷದ ನಮ್ಮ ದಾಂಪತ್ಯದಲ್ಲಿ, ನನ್ನ ಕಾಂಡ ಅವಳ ಕಾಂಡವನ್ನೂ ಮೀರಿ ಬೆಳೆದು ಹೆಚ್ಚಕಡಿಮೆ ಎಪ್ಪತ್ತೈದು ಭಾಗದಷ್ಟು ಆವರಿಸಿಕೊಂಡಿತ್ತಲ್ಲ, ಸುಮ್ಮನೆ ಹೀಗೆ ತಬ್ಬುತ್ತಾ ಒತ್ತಿಹಿಡಿದು ಅವಳನ್ನು ಸಮಾಧಾನ ಮಾಡಿದೆ. 'ದುಡುಕಬೇಡ, ಸತ್ತರೆ ನಾವಿಬ್ಬರೂ ಒಟ್ಟಿಗೇ ಸಾಯುತ್ತೇವಲ್ಲ...' ಎಂದೆ. ನಾನು ನಮ್ಮ ಉಳಿವಿಗಾಗಿ ಹೋರಾಡುವ ಬದಲು ತಟಸ್ಥನಾಗಿ ಉಳಿಯಲು ನಿರ್ಧರಿಸಿದೆ. ನಮಗೂ ಸಾಕಷ್ಟು ವಯಸ್ಸಾಯಿತಲ್ಲ, ಇನ್ನೂ ಬದುಕುಳಿಯಬೇಕೆನ್ನುವುದು ಸ್ವಾರ್ಥದ ಪರಮಾವಧಿಯಲ್ಲವೇ?

ಅವರವರೇ ತಂಡೋಪತಂಡವಾಗಿ ಬಂದರು. ಅವರದೊಂದು ತಂಡ, ಇವರದೊಂದು ತಂಡ. ಇವರಿಗೂ ಅವರಿಗೂ ಸಮನ್ವಯತೆ ಇರಲಿಲ್ಲ. ಅವರದೇ ಬೇರೆ ಇಲಾಖೆ, ಇವರದೇ ಬೇರೆ ಇಲಾಖೆ. ಮೆಟ್ರೋದವರು ದೇವರ ವಿಗ್ರಹಗಳಿರುವ ನಮ್ಮನ್ನು ಮುಟ್ಟಿ ಸಮಸ್ಯೆಯನ್ನು ಮೈಮೇಲೆ ಎಳೆದುಕೊಳ್ಳುವುದು ಬೇಡ ಎಂದು ಅರೆಮನಸ್ಸಿನಿಂದ ಹೇಳಿದರೂ, 'ಎರಡೂ ರಸ್ತೆಯ ಮಧ್ಯಕ್ಕೇ ರೈಲ್ವೆ ಲೈನ್ ಬರುವುದರಿಂದ ನೇರವಾಗಿದ್ದರೆ ಒಳಿತು ಅಷ್ಟೇ. ಇಲ್ಲದಿದ್ದರೂ ಪರವಾಗಿಲ್ಲ, ನಾವು ಎರಡೂ ಕಡೆ ನೆಲದಲ್ಲಿ ಪಿಲ್ಲರ್‌ಗಳನ್ನು ಏರಿಸಿ ಸ್ವಲ್ಪ ಓರೆ ಮಾಡಿಕೊಂಡಾದರೂ ಓಡಿಸಲು ತಯಾರು' ಎಂದು ಹೇಳಿ ಹೆದ್ದಾರಿ ಇಲಾಖೆಯ ಮೇಲೆ ಒರಗಿಸಿ ತಾನು ಪಕ್ಕಕ್ಕೆ ಸರಿಯಿತು ನೀವು ಬೇಕಾದರೆ ಜನರ ಪ್ರತಿಭಟನೆಯನ್ನು ಎದುರಿಸಿಕೊಳ್ಳಿ ಎನ್ನುವಂತೆ.

ಆದರೆ ಹಾಗಂತ ಹೆದ್ದಾರಿ ಇಲಾಖೆಗೆ ಗತ್ಯಂತರವೇ ಇರಲಿಲ್ಲ. ಎಂಟು ಪಥದ ಆ ರಸ್ತೆಯಲ್ಲಿ ತಲಾ ಮೂರರ ಎರಡು ಪಥವನ್ನು ಫ್ಲೈಓವರ್‌ನಲ್ಲಿ ನಿರ್ವಹಿಸಲೇಬೇಕಿತ್ತು. ಬಹಳ ತಲೆಕೆಡಿಸಿಕೊಂಡರು. ನಾನು ವ್ಯಾಪಿಸಿದ್ದ ಸುಮಾರು ಇನ್ನೂರು ಅಡಿಗಳ ಅಗಲದ ಮಧ್ಯೆ ಅವರು ಎರಡು ಕಡೆಯಿಂದ ಎರಡೆರಡು ಪಥದ ಫ್ಲೈಓವರ್ ಅನ್ನು ವಿಭಜಿಸಿ ತರಲೂ ಸಾಧ್ಯವಿರಲಿಲ್ಲ. ತಾಯಿಬೇರಿನಂತೆ ನನ್ನ ಕೇಂದ್ರದ ಕೊಂಬೆಯನ್ನು ಉಳಿಸಿಕೊಂಡು ಉಳಿದೆಲ್ಲ ರೆಂಬೆಗಳನ್ನು ಕಡಿದು ನಿರ್ಜೀವ ಮಾಡಿ ಜನರಿಗೆ ಮರವನ್ನು ಉಳಿಸಿದ್ದೇವೆಂಬ ಸಮಾಧಾನ ನೀಡಲೆಂದರೆ ನನ್ನಲ್ಲಿನ ಎಲ್ಲ ಎಂಟೂ ಕೊಂಬೆಗಳೂ ಎಂಟು ದಿಕ್ಕುಗಳಿಗೆ ಪಸರಿಸಿಕೊಂಡುಬಿಟ್ಟಿದ್ದವು. ಹೆಚ್ಚೆಂದರೆ ನನ್ನ ಎಲ್ಲ ರೆಕ್ಕೆಗಳನ್ನು ಕಡಿದು ಕೇವಲ ಕಾಂಡವನ್ನು ಮಾತ್ರ ಬಿಡಬಹುದಿತ್ತಷ್ಟೇ. ಹಾಗೆ ಬಿಟ್ಟರೆ ನನ್ನನ್ನು ನಿರ್ಜೀವ ಮಾಡಿದಂತೆ. ನನ್ನ ಎಲೆಗಳಿಲ್ಲವೆಂದರೆ ನನಗೆ ಪತ್ರಹರಿತ್ತು ಇಲ್ಲದೇ ಆಹಾರವನ್ನು ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಬರೀ ಕಾಂಡವನ್ನು ಇಟ್ಟುಕೊಂಡು ನಾನು ಪ್ರೇತಾತ್ಮದಂತೆ ಬದುಕಬೇಕೆ? ಸಾಧ್ಯವಿಲ್ಲ. ಇರುವುದಾದರೆ ಇಡಿಯಾಗಿ ಇರಬೇಕು, ಇಲ್ಲವಾದರೆ ಸಂಪೂರ್ಣವಾಗಿ ಹೋಗಿಬಿಡಬೇಕು ಎಂದು ನಾನಾದರೂ ಆಲೋಚಿಸುತ್ತಿದ್ದೆ. ಅವರು ಏನು ತೀರ್ಮಾನಕ್ಕೆ ಬರುತ್ತಾರೋ ಬರಲಿ, ಎರಡಕ್ಕೂ ನಾನು ಸಿದ್ಧ ಎಂದು ತಟಸ್ಥನಾಗಿರಲು ನಿರ್ಧರಿಸಿದ್ದೆ.

ಸಿದ್ಧಗಂಗಯ್ಯನ ಅಧ್ಯಕ್ಷತೆಯಲ್ಲಿ ನಡೆದ ಸಮಾಲೋಚನೆಯಂತೆ ನನ್ನನ್ನು ಕಡಿಯುವುದು ಎಂದೇ ತೀರ್ಮಾನವಾಗಿ, ಆ ಪ್ರಸ್ತಾವನೆ ಲೋಕೋಪಯೋಗಿ ಮಂತ್ರಿಯ ಮುಂದೆ ಹೋಗಿ ಅಲ್ಲಿಯೂ ಅನುಮೋದನೆಯಾಗಿ, ಮುಖ್ಯಮಂತ್ರಿಗಳ ಮುಂದೆ ಹೋಯಿತು. ಮುಖ್ಯಮಂತ್ರಿ ನಮ್ಮ ಜಿಲ್ಲೆಯ ಮಗ. ನನ್ನ ಬುಡದಲ್ಲಿ ಕುಂತು, ನಿಂತು ಅನೇಕ ಭಾಷಣಗಳನ್ನು ಮಾಡಿದ್ದಾತ. ಆತ ಇನ್ನೂ ಹುಡುಗನಾಗಿದ್ದಾಗ ಚೆಡ್ಡಿ ಹಾಕಿಕೊಂಡು ಸೈಕಲ್ ಮೇಲೆ ಜಾಥಾ ಹೊರಡುತ್ತಿದ್ದಾಗಿನಿಂದ ಹಿಡಿದು, ನೆಹರೂ ಸ್ಟೇಡಿಯಂನಲ್ಲಿ ಮೈಕು ಹಿಡಿದು ಸಾವಿರಾರು ಜನರನ್ನು ಉದ್ದೇಶಿಸಿ ಮಾತಾಡುವವರೆಗೂ ನನ್ನನ್ನು ಬಲ್ಲ ಆತ. ಆದರೆ ನಾನೇ ಮರೆತುಬಿಟ್ಟಿದ್ದೆ. ಯಾವಾಗಲೂ ನಮ್ಮ ಮೌಲ್ಯ ಏನು, ನಮ್ಮ ಯೋಗ್ಯತೆ ಏನು, ನಮ್ಮ ಪ್ರಭಾವ ಏನು ಅಂತ ನಮಗೇ ಗೊತ್ತಾಗುವುದಿಲ್ಲವಂತೆ.

ಹೈಪವರ್ ಕಮಿಟಿ ಮೀಟಿಂಗ್ ಕರೆದ ಮುಖ್ಯಮಂತ್ರಿ, 'ಮರ ಕಡಿಯುವ ಪ್ರಸ್ತಾವನೆಯೊಂದನ್ನು ಬಿಟ್ಟು ಇನ್ನು ಯಾವ ರೀತಿಯಲ್ಲಿ ಪ್ರಸ್ತಾವನೆ ಕೊಡುತ್ತೀರೋ ಕೊಡಿ' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. 'ಸರ್, ಇದು ಕೇಂದ್ರ ಸರ್ಕಾರದ ಯೋಜನೆ. ಕೇಂದ್ರದ ಸಾರಿಗೆ ಮಂತ್ರಿಗಳು ಅಭಿವೃದ್ಧಿ ಕೆಲಸಕ್ಕೆ ಯಾರೂ ಅಡ್ಡಬರದಂತೆ ನೋಡಿಕೊಳ್ಳಬೇಕು ಅಂತ ಹೇಳಿದ್ದಾರೆ...' ಎಂದು ಲೋಕೋಪಯೋಗಿ ಸೆಕ್ರೆಟರಿ ಹೇಳುತ್ತಿದ್ದಂತೆಯೇ ಕೆಂಡಾಮಂಡಲವಾದ ಮುಖ್ಯಮಂತ್ರಿಗಳು, 'ಆ ಅರಳೀಮರದ ಮಹತ್ವ ನಿಮಗೇನು ಗೊತ್ತಿದೇರೀ... ಫ್ಲೈಓವರ್ ಆಗದಿದ್ದರೂ ಪರವಾಗಿಲ್ಲ, ನನ್ನ ಜಿಲ್ಲೆಗೆ ಎಷ್ಟೆಲ್ಲ ಕೆಲಸ ನಾನು ಮಾಡಿಕೊಟ್ಟಿದ್ದೇನೆ. ನನ್ನ ಅಧಿಕಾರದ ಅವಧಿಯಲ್ಲಿ ಇಂಥದೊಂದು ಕೆಲಸ ಮಾಡಲಿಲ್ಲ ಎಂದು ಜನ ಆಡಿಕೊಂಡರೂ ಪರವಾಗಿಲ್ಲ...' ಎಂದು ಗರಂ ಆದವರು, 'ಬೇರೆ ಪ್ರಸ್ತಾವನೆ ತಯಾರಿಸಿಕೊಂಡು ತನ್ನಿ' ಎಂದು ಎದ್ದು